ಇನ್ನೂ ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಲ್ಲಿದೆ ಎನ್ನುವ ಮಾತು ಹೇಳುತ್ತಾರೆ. ಆ ಬಗ್ಗೆ ಭರವಸೆ ಕೊಟ್ಟಿದ್ದಾರೆ, ಆದರೆ, ಇನ್ನೂ ಅನುದಾನ ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ. ಸರ್ಕಾರ ಆದಷ್ಟು ಬೇಗ ಆ ಅನುದಾನ ಬಿಡುಗಡೆ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋದ್ಧ ಪಕ್ಷದ ನಾಯಕರು ಪ್ರಸ್ತಾಪಿಸಿರುವ ವಿಷಯವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಬರುತ್ತದೆ. ಸಂಬಂಧಪಟ್ಟ ಸಚಿವರು Council ನಲ್ಲಿದ್ದಾರೆ. ಏನಿದೆ ಎಂದು ವಿಚಾರ ಮಾಡಿ ಉತ್ತರ ಕೊಡುತ್ತಾರೆ.

6) ವಿಷಯ: ವೇತನಾನುದಾನದ ಬಗ್ಗೆ

ಶ್ರೀ ಪಿ. ರಾಜೀವ್ (ಕುಡಚಿ): ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ಮೊರಬಾ ಗ್ರಾಮದಲ್ಲಿರುವ ಸಿದ್ದೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿರುವ ಅಜಿತ್ ಕುಮಾರ್ ಎಸ್ ಬಾನೆ ಕನ್ನಡ ಮಾಧ್ಯಮಿಕ ಪ್ರಾಥಮಿಕ ಶಾಲೆ, ಇದಕ್ಕೆ ದಿನಾಂಕ: 14-03-2013 ರಂದು ವೇತನಾನುದಾನಕ್ಕೆ ಆದೇಶವಾಗಿದೆ. ಆದರೆ, ಆ ಶಿಕ್ಷಣ ಸಂಸ್ಥೆಯ ಆಂತರಿಕ ವ್ಯಾಜ್ಯಗಳಿಂದ ಶಿಕ್ಷಕರನ್ನು ಇವತ್ತಿನವರಗೆ ವೇತನಾನುದಾನಕ್ಕೆ ಒಳಪಡಿಸಲಿಕ್ಕೆ ಆಗಿಲ್ಲ. ಇದರ ಸಲುವಾಗಿ ಶಿಕ್ಷಕರು Writ Petition ಹಾಕಿದರು.

ಅಧ್ಯಕ್ಷರು: ಈಗ ಏನಾಗಬೇಕು ಹೇಳಿ.

ಶ್ರೀ ಪಿ. ರಾಜೀವ್: ಅವರಿಗೆ ವೇತನಾನುದಾನವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಇದೂ ಕೂಡ ಅಷ್ಟೆ. ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

7) ವಿಷಯ: ಮಂಡ್ಯ MUDA ಹಗರಣ ಬಗ್ಗೆ

ಅಧ್ಯಕ್ಷರು: ಮಾನ್ಯ ಚಲುವರಾಯಸ್ವಾಮಿಯವರೆ, ನೀವು ಆಗಲೇ ಪ್ರಸ್ತಾಪಿಸಿದ್ದೀರಲ್ಲ. ಮತ್ತೇಕೆ ಇದೇ ವಿಷಯ ಬಂತು?

ಶ್ರೀ ಎನ್. ಚಲುವರಾಯಸ್ವಾಮಿ: ಇಲ್ಲ ಸಾರ್.

ಅಧ್ಯಕ್ಷರು: ಎಷ್ಟು ಸಲ ಒಂದೇ ಚಿಷಯವನ್ನು ಕೇಳುವುದು?

ಶ್ರೀ ಎನ್. ಚಲುವರಾಯಸ್ವಾಮಿ: ಕೇಳಿಲ್ಲ, ಸಾರ್

ಅಧ್ಯಕ್ಷರು: NO

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ನಿಮಗೆ ಇಷ್ಟ ಇಲ್ಲವೆಂದರೆ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು: ಇಷ್ಟ ಇಲ್ಲ ಅಂತಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ: ನಿಮಗೆ ಸಮಾಧನವಾದರೆ ನನಗೆ ಅವಕಾಶ ಕೊಡಿ. ಸಮಾಧಾನವಾಗದಿದ್ದರೆ ಬೇಡ. ಮೊನ್ನೆ general ಆಗಿ ವಿಷಯ ಪ್ರಸ್ತಾಪಿಸಿದ್ದೆವು. ಮಹದೇವ ಪ್ರಸಾದ್‌ರವರ ಬಗ್ಗೆ ನನಗೂ ಗೌರವವಿದೆ. Criminal ದಾಖಲೆ ಮಾಡಿದ ಒಬ್ಬ ವಂಚಕ ಕೆಬ್ಬಳ್ಳಿ ಆನಂದ ಎನ್ನುವವ ಹಲವಾರು ಹಗರಣಗಳಲ್ಲಿ ಸಿಕ್ಕಿರುವವನು. ಅಧ್ಯಕ್ಷರನ್ನು MD ಯನ್ನು ಹಲವಾರು ಬಾರಿ ಒಪ್ಪಿಸಿ, 2 ಕೋಟಿ ರೂಪಾಯಿಗಳು Indian Bank ಗೆ transfer ಮಾಡಿಸಿದ್ದಾರೆ. ಮತ್ತೆ ಕಟ್ಟಿರುವುದು ಬೇರೆ. ಆ MD, ಅಧ್ಯಕ್ಷರ ಮೇಲೆ criminal case. ಹಾಕಿ. ಆ Board ಅನ್ನು supersede ಮಾಡುತ್ತೀರೋ, ಕ್ರಮ ತೆಗೆದುಕೊಳ್ಳುತ್ತೀರೋ? ಮಹದೇವ ಪ್ರಸಾದ್‌ರವರು ಒಂದು ವಾರದಿಂದ ಅದರ ಕಡೆಗೆ ಗಮನವನ್ನೇ ಹರಿಸಿಲ್ಲ. Enquiry ಮಾಡಿ report ತರಿಸುತ್ತೇನೆ. ಎಂದು ಹೇಳುತ್ತಾರೆ. ಇಂಥ ಕಳ್ಳರಿಗೆ? 2 ಕೋಟಿ ರೂಪಾಯಿ ರೈತರ ಹಣ ಸ್ವಾಮಿ. DCC Bank society ಹಣ. ಇದರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ಆಗಿದೆ. ದಯವಿಟ್ಟು criminal case ಹಾಕಿ ಮೊದಲು arrest ಮಾಡಿ supersede ಮಾಡಿ. ಇಂಥ ಜನರಿಗೆ ರಕ್ಷಣೆ ಕೊಡುವ ಕೆಲಸ ಮಾಡಬಾರದು. ಮಂಡ್ಯ ಜಿಲ್ಲೆಯಲ್ಲಿ ಲೂಟಿ ಹೊಡೆಯುತ್ತಿದ್ದಾರೆ. ನಗರಸಭೆ, MUDA ಕೇಳುತ್ತೀರೋ, ಬ್ಯಾಂಕ್ ಕೇಳುತ್ತೀರೋ, ಮಹಿಳಾ ಬ್ಯಾಂಕ್ ಈ ತರಹ ಬ್ಯಾಂಕ್ ಅಲ್ಲ. ಇಂಥವರಿಗೆ ಅವಕಾಶ ಕೊಡುತ್ತೀರಾ? ಎಲ್ಲ ಒಂದೇ gang ನವರು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಆ ಘಟನೆ ನಡೆದಿರುವುದು ನಿಜ. ಹಾಗಾಗಿ ಆ ವಿಚಾರದಲ್ಲಿ ಆಗಲೇ ನಾವು Police case ದಾಖಲು ಮಾಡುವುದಕ್ಕೆ ನಿರ್ದೇಶನ ಕೊಟ್ಟಿದ್ದೇವೆ ಜೊತೆಗೆ ಜಿಲ್ಲಾಧಿಕಾರಿಗಳು ಕೂಡ ಇದರ ಕಡೆ ಗಮನಹರಿಸಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ: ನಾನು D.R. ಗೆ phone ಮಾಡಿದರೆ ನನಗೆ ಯಾವುದೂ complaint ಬಂದಿಲ್ಲವೆಂದು ಹೇಳುತ್ತಾರೆ. ದುಡ್ಡು ಹೊಡೆದಿರುವುದು ಗೊತ್ತಾದ ಮೇಲೆ complaint ಯಾರಿಗೆ ಕೊಡಬೇಕು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ, MUDA ದಲ್ಲಿನ deposit ಅನ್ನು ತೆಗೆದುಕೊಂಡು ಹೋಗಿ Mandya ದ Indian Bank ನಲ್ಲಿ ಇಟ್ಟಿದ್ದರು. ಆ ಬಗ್ಗೆ enquiry ಮಾಡುವುದಕ್ಕೆ ಹೋದಾಗ ಚಂದ್ರಶೇಖರ ಎನ್ನುವವನ account ನಲ್ಲಿ ಹೆಚ್ಚುವರಿಯಾಗಿ 2 ಕೋಟಿ ರೂಪಾಯಿ ಇದ್ದುದನ್ನು ಆಗ enquiry ಮಾಡಿ police ವರಿಷ್ಠ ಅಧಿಕಾರಿಗಳು ಪತ್ತೆಹಚ್ಚಿದ್ದರು. ಆ 2 ಕೋಟಿ ರೂಪಾಯಿ ಎಲ್ಲಿಂದ ಬಂತು ಎಂದು ಕೇಳಿದಾಗ, ಅವನು, ನಾನು DCC Bank ನಿಂದ draw ಮಾಡಿ deposit ಇಡುವುದಕ್ಕೆ ಕೊಟ್ಟ ಹಣವನ್ನು ನನ್ನ account ನಲ್ಲಿಟ್ಟಿದ್ದೇನೆ ಎಂದು Statement ಕೊಟ್ಟಿದ್ದಾನೆ. ಆ statement ನ ಆಧಾರದ ಮೇಲೆ SP ಯವರು DC ಮುಖಾಂತರ ನಮ್ಮ ಇಲಾಖೆಯ ಗಮನಕ್ಕೆ ತಂದೆ ಮೇಲೆ ನಮ್ಮ ಇಲಾಖೆಯವರು ಕೂಡ case register ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. MD ಮತ್ತು ಅಧ್ಯಕ್ಷರ ಮೇಲೆ criminal case book ಮಾಡಿದೆ. 2 ಕೋಟಿ ರೂಪಾಯಿಗಳ ಹಣ ಮಧ್ಯವರ್ತಿಗಳ ಮುಖಾಂತರ Indian Bank ನಲ್ಲಿ ಇಡಿಸುವುದಕ್ಕೆ ಹೋಗಿದ್ದರೋ ಆ ಹಣದಲ್ಲಿ 1 ಕೋಟಿ ರೂಪಾಯಿ deposit ಇಟ್ಟಿದ್ದರು voucher ಅನ್ನೇ ಅಂದರೆ ಇನ್ನೊಂದು ಕೋಟಿ ರೂಪಾಯಿಗೂ ಆ voucher ಅನ್ನು ತೋರಿಸಿದಾಗ ಇವರಿಗೆ ಅನುಮಾನ ಬಂದು ವಿಚಾರಿಸಿದ್ದಾರೆ. ಮೊನ್ನೆ ನೀವು ವಿಷಯ ಪ್ರಸ್ತಾಪಿಸಿದಾಗ ಇದು ಈ stage ನಲ್ಲಿತ್ತು.

ಮಾನ್ಯ ಸದಸ್ಯರಿಂದ ಭಾಷಣ ಪರಿಷ್ಕರಿಸಲ್ಪಟ್ಟಿದೆ.

ಅಧ್ಯಕ್ಷರರು: Case register ಮಾಡಿ investigation ಶುರು ಮಾಡಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: case register ಆಗಿದೆ. MD ಮತ್ತು ಅಧ್ಯಕ್ಷರ ಮೇಲೆ ಕ್ರಮ ತೆಗದುಕೊಳ್ಳಲು ಸೂಚನೆ ಕೊಟ್ಟಾಗಿದೆ.